ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಬುಧವಾರ, ದಿನಾಂಕ : 11 ನೇ ಮಾರ್ಚ್, 2020

ಕೃಷಿ ಯಂತ್ರ ಉಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ರೈತರಿಗೆ ನೀಡುವ ಕುರಿತು

ಶ್ರೀಹೆಚ್.ಎಂ.ರಮೇಶ್‌ಗೌಡ(ವಿಧಾನಸಭೆಯಿಂದಚುನಾಯಿತರಾದವರು) :-

638 (821) ಮಾನ್ಯ ಕೃಷಿ ಸಚಿವರು ಈ ವಿಷಯಗಳÀನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ 2019-20ನೇ ಸಾಲಿನಲ್ಲಿ ಕೃಷಿ ಯಾಂತ್ರಿಕ ಉಪಕರಣಗಳು ಬಾಡಿಗೆ ಆಧಾರದ ಮೇಲೆ ರೈತರಿಗೆ ಒದಗಿಸಲಾಗುತ್ತಿದೆಯೇ ;

(ಆ) ಹಾಗಿದ್ದಲ್ಲಿ, ರೈತರಿಗೆ ಅನುಕೂಲವಾಗುವಂತೆ ಸದರಿ ಕೃಷಿ ಯಾಂತ್ರಿಕ ಉಪಕರಣಗಳ ಕೇಂದ್ರಗಳನ್ನು ಕೃಷಿ ಕೇಂದ್ರ ಹೋಬಳಿ, ಗ್ರಾಮ ಪಂಚಾಯಿತಿ ಸ್ಥಾನಗಳಲ್ಲಿ ತೆರೆಯಲಾಗಿದೆಯೇ ;

(ಇ) ಈ ಕೃಷಿ ಯಾಂತ್ರಿಕ ಉಪಕರಣ ಕೇಂದ್ರಗಳಲ್ಲಿ ರೈತರಿಗೆ ಯಾವ ಯಾವ ಯಾಂತ್ರಿಕ ಸಲಕರಣೆಗಳನ್ನು ಒದಗಿಸಲಾಗಿದೆ ; (ಮಾಹಿತಿ ನೀಡುವುದು)

(ಈ) ಇತ್ತೀಚಿನ ಆಧುನಿಕ ಕೃಷಿ ಯಾಂತ್ರಿಕ ಉಪಕರಣಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ಒದಗಿಸಿ ಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ? (ವಿವರ ನೀಡುವುದು)